**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 644/2011** **ಪ್ರಾ.ಸಾ – 4**
**ಚಾ.ಸಾ –3**

**ದಿನಾಂಕ: 20-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಲೋಕೇಶ್ |
| ತಂದೆಯ ಹೆಸರು | : | ಭೀಮಯ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹರವೇಸಂದ್ರ ಗ್ರಾಮ , ಗುಬ್ಬಿ ತಾ. |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ಯವರಿಂದ**

ಆರೋಪಿತರ ಪರಿಚಯ ನನಗೆ ಇಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ. ಯಾವುದೇ ವಸ್ತುಗಳನ್ನು ನನ್ನ ಸವಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ.

ಸಾಕ್ಷಿ ನಿಪಿ.4 ಮತ್ತು 5 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಫಿ4(ಬಿ) ಮತ್ತು 5(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಹಾಕಿರುತ್ತೇನೆಂದು ನನಗೆ ಗೊತ್ತಿಲ್ಲ. ನಾನು ಪೋಲಿಸ್ ಠಾಣೆಗೆ ಹೋದಾಗ , ಪೋಲಿಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಮತ್ತು ಆರೋಪಿತನನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ನಾನು ಪೋಲಿಸರ ಮುಂದೆ "ದಿನಾಂಕ10-06-2007 ರಂದು ............................. … ಹಾಕಿಕೊಂಡು ಬಂದರು " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

ದಿಃ 10.06.2007 ರಂದು ಬೆಳಗ್ಗೆ ನನ್ನನ್ನು ಗುಬಿ ಬಸ್ ನಿಲ್ದಾಣದಿಂದ ಪೋಲಿಸ್ ಠಾಣೆಗೆ ಪೋಲಿಸರು ಬರಮಾಡಿಕೊಂಡರು ಹಾಗು ಅದೇ ಕಾಲಕ್ಕೆ ಚಾಸಾ- 2 ರವರನ್ನು ಸಹ ಬರಮಾಡಿಕೊಂಡರು ಎಂದರೆ ಸರಿಯಲ್ಲ. ಈಗಾಗಲೇ ದಸ್ತಗಿರಿಯಾದ 4 ಆರೋತರನ್ನು ತೋರಿಸಿ ಇವರು ಏನು ಹೇಳುತ್ತಾರೋ, ಏನನ್ನು ತೋರಿಸುತ್ತಾರೋ ಆ ವಸ್ತುಗಳನ್ನು ಅಮಾನತ್ತು ಮಾಡಬೇಕಾಗಿದೆ. ಹಾಗಾಗಿ ನೀವು ಪಂಚರಾಗಿ ಸಹಕರಿಸಿ ಎಂದು ಕೇಳಿಕೊಂಡಿದ್ದು ನಾವಿಬ್ಬರೂ ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಆರೋಪಿತರನ್ನು ವಿಚಾರಿಸಲಾಗಿ ಅವರ ಹೆಸರು ಮಧು ಅಲಿಯಾಸ್ ಸೋಡ, ಯೋಗೀಶ್ ಬಿನ್ ಗಂಗಣ್ಣ, ಬಿ.ಎಸ್.ಪರಮೇಶ್ ಬಿನ್ ಸಿದ್ಧಬಸವಯ್ಯ, ಶಫೀಕ್ ಪಾಷ ಬಿನ್ ಸಯ್ಯದ್ ರಸೂಲ್ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ಅವರು ಗುಬ್ಬಿ ತಾಲ್ಲೂಕು , ಹೆರೂರು , ದೊಡ್ಡಗುಣಿ, ತುರುವೇಕೆರೆ , ದಬ್ಬೆಘಟ್ಟ , ಗೋಣಿ ತುಮಕೂರು , ದಂಡಿನಶಿವರ , ಭೈತರ ಹೊಸಹಳ್ಳಿ , ತಿಪಟೂರು , ಹಿಂಡಿಸ್ಕೆರೆ , ತುಮಕೂರು , ಮಲ್ಲಸಂದ್ರ ಹಾಗೂ ನೆಲಮಂಗಲ ತಾಲ್ಲೂಕು ಬಸವಹಳ್ಳಿ , ಎಂಟಗಾನಹಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ ಕಛೇರಿ ಹಾಗೂ ಪಾಠ ಶಾಲೆಯ ಬೀಗವನ್ನು ರಾತ್ರಿ ವೇಳೆಯಲಿ ಮುರಿದು ಕಂಪೂಟರ್ ಸೆಟ್ ಗಳನ್ನು ಕಳುವು ಮಾಡಿದ್ದು ಅವುಗಳನ್ನು ಬೆಂಗಳೂರಿನಲ್ಲಿ ಮಾರಾಟ ಮಾಡಿರುತ್ತೇವೆಂದು ತಿಳಿಸಿದರು ಎಂದರೆ ಸರಿಯಲ್ಲ. ಅ ದೇ ರೀತಿ ಅವರು ನಮ್ಮಗಳನ್ನು ಕರೆದುಕೊಂಡು ಹೋದರೆ ತೋರಿಸಿ ಹಾಜರುಪಡಿಸಿರುತ್ತೇವೆ ಎಂದು ತಿಳಿಸಿದ್ದು ನಾವುಗಳು ಪೋಲಿಸ್ ಜೀಪಿನಲ್ಲಿ ಅವರೊಂದಿಗೆ ಬೆಂಗಳೂರಿಗೆ ಹೋಗಿದ್ದು ಅತಾವುಲ್ಲಾ ಬೇಗ್ ರವರ ಗುಜರಿ ಅಂಗಡಿಯ ಬಳಿ ಹೋಗುತ್ತಿದ್ದಂತೆ ಆರೋಪಿತರು ಜೀಪನ್ನು ನಿಲಿಲಸುವಂತೆ ಹೇಳಿದ್ದೂಕೆ ಜೀಪನ್ನು ನಿಲ್ಲಿಸಿದ್ದು 1 ರಿಂದ 3ನೇ ಆರೋಪಿತರು ಜೀಪನಿಂದ ಇಳಿದು ಅತಾವುಲ್ಲಾ ಬೇಗ್ ಎಂದು ಕೂಗಿ ಆತನನ್ನು ಕರೆದು ಈ ಹಿಂದೆ ನಿಮಗೆ ಕೊಟ್ಟಿದ್ದ

ಕಂಪ್ಯೂ ಟರ್ ಗಳನ್ನು ನಾವು ಹಲವಾರು ಗ್ರಾಮ ಪಂಚಾಯಿತಿಗಳಲ್ಲಿ ಕಳುವು ಮಾಡಿದ್ದು ಅವುಗಳನ್ನು ನಿಮಗೆ ಮಾರಾಟ ಮಾಡಿದ್ದು ಅವುಗಳನ್ನು ಕೊಡಿ ಎಂದು ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದರೆ ಸರಿಯಿಲ್ಲ. ನಂತರ ಅಲಿಲಂದ ರಾಕೇಶ್ ಮತ್ತು ನವೀನ್ ರವರ ಮನೆಯ ಬಳಿ ಕರೆದು ಕೊಂಡು ಹೋಗಿ ಅವರನ್ನು ಮನೆಯಿಂದ ಹೊರಗೆ ಕ ರೆದು ದೊಡ್ಡಗುಣಿ , ಹಿಂಡಿಸ್ಕೆರೆ ಮತ್ತು ಮಲ್ಲಸಂದ್ರ ಗ್ರಾಮ ಪಂಚಾಯಿತಿಯಲ್ಲಿಕಳುವು ಮಾಡಿದ ಕಂಪ್ಯೂ ಟರ್ ವಸ್ತುಗಳನ್ನು ನಿಮಗೆ ಮಾರಾಟ ಮಾಡಿರುತ್ತೇವೆ ಅದನ್ನು ಕೊಡಿ ಎಂದು ಕೇಳಿಕೊಂಡಿದ್ದು ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದರೆ ಸರಿಯಿಲ್ಲ. ನಂತರ ಅಲ್ಲಿಂದ ದಿವಾಕರ್ ರವರ ಮನೆಯ ಬಳಿ ಕರೆದುಕೊಂಡು ಹೋಗಿ ಆತನನ್ನು ಹೊರಗೆ ಕರೆದು ಹೇರೂರು ಗ್ರಾಮ ಪಂಚಾಯಿತಿಯಲ್ಲಿ ಕಳುವು ಮಾಡಿದ ಕಂಪ್ಯೂ ಟರ್ ವಸ್ತುಗಳನ್ನು ನಿಮಗೆ ಮಾರಾಟ ಮಾಡಿರುತ್ತೇವೆ ಅದನ್ನು ಕೊಡಿ ಎಂದು ಕೇಳಿಕೊಂಡಿದ್ದು ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದರೆ ಸರಿಯಿಲ್ಲ. ಅಮಾನತ್ತು ಪಡಿಸಿಕೊಂಡ ಎಲ್ಲ ಕಂಪ್ಯೂ ಟರ್ ಗಳನ್ನು ಪೋಲಿಸ ರು ಖಾಸಗಿ ವಾಹನದಲ್ಲಿ ಹಾಕಿಕೊಂಡು ಬಂದರು ಎಂದರೆ ಸರಿಯಲ್ಲ. ನಿಫಿ4 ಪಂಚನಾವೇಯನ್ನು ಸಂಜೆ 4.15 ರಿಂದ 6.00 ಗಂಟೆಯವರೆಗೆ ಹಿಂಡಿಸ್ಕೆರೆ ಗ್ರಾಮ ಪಂಚಾಯಿತಿ ಕಛೇರಿಯ ಮುಂಭಾಗ ಬರೆಯಲಾಯಿತು ಎಂದರೆ ಸರಿಯಲ್ಲ ನಿಪಿ.5 ಪಂಚನೆಮಯನ್ನು ಮ. 11.45 ರಿಂದ 12.45 ಗಂಟೆಯವರೆಗೆ ಗೊರಗುಂಟೆ ಪಾಳ್ಯ ದಲ್ಲಿ ಬರೆಯಲಾಯಿತು ಎಂದರೆ ಸರಿಯಲ್ಲ.

**ವಾಟೀ ಸವಾಲು ಆರೋಪಿ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾ ಯಾಧೀಶರು, ತಿಪಟೂರು.**